# AI ಗೆಳತಿ!

## ನಮಗೂ ಒಬ್ಬ ಎಐ ಗೆಳತಿ ಬೇಕು...
## ಇದು ಹೊಸ ತಲೆಮಾರಿನ ಹಾಡು

ಗರ್ಲ್ ಫ್ರೆಂಡ್ ಎನ್ನುವ ಪದದಲ್ಲಿಯೇ ಮೋಹಕತೆಯಿದೆ. ಡಿಜಿಟಲ್ ಜಗತ್ತಿನ ಗೆಳತಿ ಮತ್ತೂ ವಿಶೇಷ. ವಿಶ್ವ ಬೌದ್ಧಿಕ ವಲಯದಲ್ಲಿ ಸಂಚಲನ ಸೃಷ್ಟಿಸಿರುವ ಯಾಂತ್ರಿಕ ಬುದ್ಧಿಮತ್ತೆ, ಈಗ ಗೆಳತಿಯರನ್ನೂ ಸೃಷ್ಟಿಸಿದೆ. ಯಾರು ಬೇಕಾದರೂ ಈ ಗೆಳತಿಯರ ಸೇವೆ ಪಡೆಯಬಹುದು. ಭಾವನೆಗಳನ್ನು ಹಂಚಿಕೊಳ್ಳಬಹುದು, ಸಲಹೆ ಕೇಳಬಹುದು, ಮಾನಸಿಕ ಸಾಂಗತ್ಯದ ಸುಖ ಹೊಂದಬಹುದು. ಆದರೆ, ಹೆಣ್ಣಿನ ಬಗೆಗಿನ ಪೂರ್ವಗ್ರಹಗಳು 'ಎಐ ಗೆಳತಿ'ಗೆ ಸಂಬಂಧಿಸಿದಂತೆಯೂ ಗಂಡಿನಲ್ಲಿ ಪ್ರಕಟಗೊಳ್ಳುತ್ತಿರುವುದು ಹಲವು ಸಮಸ್ಯೆಗಳಿಗೆ ಕಾರಣವಾಗಿದೆ. ಡಿಜಿಟಲ್ ಕಾಲದ ಗೆಳತಿಯರ ಲೋಕವನ್ನು ಪರಿಚಯಿಸುವ ಈ ಬರಹ, ಭೌತಿಕ ಜಗತ್ತಿನ ಬಗ್ಗೆ ನಮಗೆ ಕವಿದಿರುವ ಉದಾಸೀನ ಕೊನೆಗೊಳ್ಳಬೇಕಾದ ಆಗತ್ಯವನ್ನೂ ಸೂಚಿಸುತ್ತಿದೆ.

■ ಗುರುರಾಜ್ ಎಸ್. ದಾವಣಗೆರೆ

